



ಅಮ್ಮ ಮರೆತುಬಿಡುತ್ತಾರೆ. ಅಷ್ಟೇ ಅಲ್ಲ, ಬಿಡುಗಡೆಯನ್ನು ಪಡೆಯುವುದಕ್ಕಾಗಿ ಆ ಮಕ್ಕಳು ಒಂದು ಅಸ್ತ್ರವಾಗಿ ಬಳಕೆಯಾಗಿಬಿಡುವುದುಂಟು. ಈ ಸೂಕ್ಷ್ಮ ಎಳೆಯನ್ನು ಗುರುತಿಸುವುದೇ ಆದರೆ, ಅದು ಖಂಡಿತಾ ಮಕ್ಕಳ ಹಕ್ಕುಗಳ ಉಲ್ಲಂಘನೆಯೇ ಹೌದು. ದಂಪತಿಯ ಜಗಳದಿಂದ ಮಕ್ಕಳ ಮೇಲೆ ಉಂಟಾಗುವ ಪರಿಣಾಮವನ್ನೂ ಗಮನಿಸುವ ಗೋಜಿಗೆ ಕುಟುಂಬ ಹೋಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಪರಿಣಾಮ ಕುಟುಂಬದ ಚೌಕಟ್ಟು ದಾಟಿ ಸಮಾಜದ ಮೇಲೆ ಆಗುತ್ತದೆ ಎಂಬುದೂ ಸುಳ್ಳಲ್ಲ.

ನ್ಯಾಯಮೂರ್ತಿಗಳ ಆತಂಕದ ಮಾತುಗಳ ಮುಂದುವರಿಕೆ ಹೀಗಿದೆ: 'ತಮ್ಮ ಸ್ವಾರ್ಥಗಳಿಗೆ ಮಕ್ಕಳನ್ನು ಅಸ್ತ್ರವಾಗಿ ಬಳಸಿಕೊಳ್ಳುವವರು ಹೇಡಿಗಳು. ಅವರೆಲ್ಲಾ ತಾಲಿಬಾನ್‌ಗಿಂತಲೂ ವಿಕೃತವಾದ ಮಕ್ಕಳನ್ನು ಬೆಳೆಸುತ್ತಿದ್ದಾರೆ. ಪೋಷಕರ ವೈಷಮ್ಯ, ಕಲಹ, ಮನಸ್ತಾಪಗಳನ್ನೇ ನೋಡಿಕೊಂಡು ಬೆಳೆಯುವ ಮಕ್ಕಳು ಭವಿಷ್ಯದಲ್ಲಿ ಸಮಾಜಘಾತುಕರಾಗುತ್ತಾರೆ'.

'ಮಕ್ಕಳು ದಾರಿ ತಪ್ಪಲು, ಅಪರಾಧ ಎಸಗಲು ಇಂತಹ ಪೋಷಕರೇ ಪ್ರಮುಖ ಕಾರಣ. ನಿಮ್ಮಂತಹ ಪೋಷಕರಿಂದಲೇ ಸಮಾಜಕ್ಕೆಘಾತುಕ ಮಕ್ಕಳ ಅರ್ಪಣೆಯಾಗುತ್ತಿದೆ. ನಿಮ್ಮೊಳಗಿನ ಸೇಡು ತೀರಿಸಿಕೊಳ್ಳಲು ನೀವು ನಿಮ್ಮ ಮಕ್ಕಳನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದೀರಿ. ದಯಮಾಡಿ ಇಂತಹ ಮಕ್ಕಳಲ್ಲಿ ಇಂಥ ಮನಃಸ್ಥಿತಿ ಬೆಳೆಸಬೇಡಿ. ಸಮಾಜಕ್ಕೆ ಹಾನಿ ಮಾಡಬೇಡಿ'.

ನ್ಯಾಯಮೂರ್ತಿಗಳು ಹೇಳುವಂತೆ

> ಸಾಮಾಜಿಕ ಹೊಣೆಗಾರಿಕೆ ಇಲ್ಲದ ವಕೀಲರು, ವೈದ್ಯರು ಹಾಗೂ ಪೋಷಕರೇ ಎಲ್ಲೆಲ್ಲೂ ತುಂಬಿ ತುಳುಕಾಡುತ್ತಿದ್ದಾರೆ. ಕೌಟುಂಬಿಕ ನ್ಯಾಯಾಲಯವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ದುರ್ಬಳಕೆ ಮಾಡಿಕೊಳ್ಳುವ ಬೇಜವಾಬ್ದಾರಿ ಜನರಿಂದ ದೇಶದ ಭವಿಷ್ಯವೇ ಹಾಳಾಗುತ್ತಿದೆ. ವಿದ್ಯಾವಂತರೇ ಹೆಚ್ಚಿನ ಸಂಖ್ಯೆಯಲ್ಲಿ ಇಂಥ ನೀಚ ಕೆಲಸಗಳಲ್ಲಿ ತೊಡಗಿದ್ದಾರೆ. ಹಣಕ್ಕಾಗಿ ವೃತ್ತಿ ಮಾಡೋದಲ್ಲ, ಸಮಾಜಕ್ಕೂ ಸಹಾಯ ಆಗುವ ಕೆಲಸ ಮಾಡಬೇಕು. ವಕೀಲರ ಸಂಘ ಹಾಗೂ ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ಇಂತಹ ಸಂಗತಿಗಳ ಬಗ್ಗೆ ಹೆಚ್ಚಿನ ಗಮನಹರಿಸಬೇಕು.
>
> **-ಬಿ. ವೀರಪ್ಪ**, ನ್ಯಾಯಮೂರ್ತಿ

